SRI B.B. SAVANAK.—In the answer you have stated that six bore-wells have failed and you have given the reasons also. May I know what is the expenditure for these 6 borewells which have failed ?

SRI K. PRABHAKAR:—The information is not redialy available.

SRI N.B. SIRDESAI.—May I know when the Gov-rnment is going to ca-ry out the repairs the hand-pumps which have gone out of order and whether the Government is going to appoint a mobile workshop for carrying out repairs ?

SRI K. PRABHAKAR. - Of course arrangements are there. Some of th-m have been repaired except three cases. They will be got attended to early.

Repairing of roads taken over by PWD in Shimoga District

419. S. M. SRI SHEERNALY CHANDRASHEKAR (Hosanagar).—Will the Minister for Public Works be pleased to state:—

(*a*) whether Government is aware of the fact that the Rural Communications roads taken over by Government during the last three years are in a very bad conpition particularly in Shimoga Dist.

(*b*) if so. whether Government have fixed up any agency to carry out repairs of these roads;

(*c*) if not, whether Government would take immediate action to fix up some agency to carry out the repairs of these road?

SRI S. BANGARAPPA (Minister for Public Works).—

(*a*) Yes.

(b) and (*c*) P.W.D. is incharge of maintenance of these roads. But before they can be properly maintained, such roads have to be improved. Improvements will be undertaken in a phased manner constitent with availibility of funds.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ಸ್ವಾಮಿ, ಅನೇಕ ಕಡೆಗಳಲ್ಲಿ ರಸ್ತೆಗಳು ಹಾಳಾಗಿ ಗಿಡಗೆಂಟೆಗಳು ಬೆಳೆದಿಗುವುದರಿಂದ ಆ ರಸ್ತೆಗಳನ್ನು ಸರಿ ಮಾಡಿಸುವುದಕ್ಕೆ ಜರೂರಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಸ್. ಬಂಗಾರಪ್ಪ—ಮಾನ್ಯ ಸದಸ್ಯರು ಹೇಳತಕ್ಕಂಥಾದ್ದರಲ್ಲಿ ಕೆಲವು ಮಟ್ಟಿಗೆ ಸತ್ಯ ಇದೆ ಕೆಲವು ಕಡೆಗಳಲ್ಲಿ ರಸ್ತೆಗಳು ಬಹಳ ಹಾಳಾಗಿವೆ ಎನ್ನತಕ್ಕಂಥಾ ವಿಷಯ ಏನು ಇದೆ ಇದು ರಾಜ್ಯ ಮಟ್ಟದ ಪ್ರಶ್ನೆ ಮತ್ತು ಜಿಲ್ಲಾ ಮಟ್ಟಕೆ ಸಂಬಂಧಪಟ್ಟ ವಿಷಯವಾಗಿರುತ್ತೆ. ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಬಗ್ಗೆ ಹೇಳುವುದಾದರೆ ಅನೇಕ ಕಡೆಗಳಲ್ಲಿ ರಸ್ತೆಗಳನ್ನು ಇಂಪ್ರೂ ಮಾಡ ಬೇಕಾಗಿದೆ. ಆದರೆ ಆ ಕೆಲಸವನ್ನು ರಾಜ್ಯದ ಹಣಕಾಸಿನ ಆಧಾರವನ್ನು ಅವಲಂಬಿಸಿ ತೀರ್ಮಾನ ಮಾಡ ಬೇಕಾಗಿದೆ. ಕೆಲವು ರಸ್ತೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ ಬಗ್ಗೆ ಹಣ ಜಾಸ್ತಿ ದೊರೆತಾಗ ಮಾತ್ರ ಈ ರೋಡ್ ಕೆಲಸವನ್ನು ಇಂಪ್ರೂ ಮಾಡುವುದಕ್ಕೆ ಹಂತಹಂತವಾಗಿ ಇದರ ಕಾಮಗಾರಿಯನ್ನು ಕೈಗೊಳ್ಳ ಲಾಗುವುದು ಎಂದು ನಾನು ಈಗಾಗಲೇ ಉತ್ತರದಲ್ಲಿ ತಿಳಿಸಿದ್ದೇನೆ:

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ —ತಾವು ಉತ್ತರದಲ್ಲಿ ತಿಳಿಸಿರುವಂತೆ ಹಣದ ಲಭ್ಯತೆ ಗೊಳಪಟ್ಟು ಹಂತ ಹಂತವಾಗಿ ರಸ್ತೆಯನ್ನು ಉತ್ತಮಪಡಿಸುವ ಕಾಮಗಾರಿಯನ್ನು ಕೈಗೊಳ್ಳುವಾಗುವುದು ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಒಂದು ವಿಷಯ ಏನೆಂದರೆ ಅನೇಕ ಕಡೆಗಳಲ್ಲಿ ರಸ್ತೆಗಳಲ್ಲಿ ಗಿಡಗಂಟಿಗಳು ಬೆಳೆದು ಬಿಟ್ಟು ಅಲ್ಲಿ ರಸ್ತೆ ಇದೆಯೋ ಇಲ್ಲವೋ ಅನ್ನುವ ಒಂದು ಪರಿಸ್ಥಿತಿ ಇರುವುದರಿಂದ ಅಂಥಾದ್ದಕ್ಕಾದರೂ ಕೂಡ ಅಲ್ಪಸ್ವಲ್ಪ ಹಣವನ್ನು ಒದಗಿಸಿ ಅದನ್ನು ಇಂಪ್ರೂ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ —ಈ ರಸ್ತೆಗಳ ಒಂದು ನಿರ್ವಹಣೆಗೋಸ್ಕರ ಒಂದು ಕಿಲೋ ಮೀಟರ್‌ಗೆ ಒಂದು ಸಾವಿರ ರೂಪಾಯಿ ಪ್ರಕಾರ ಹಣ ಖರ್ಚು ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ನಾನು ಶಿವಮೊಗ್ಗಾ ಜಿಲ್ಲೆ ಬಗ್ಗೆ ಹೇಳುವುದಾದರೆ ಅಲ್ಲಿ ೭೧೪.೩ ಕಿಲೋ ಮೀಟರ್ ರಸ್ತೆಯನ್ನು ಸರ್ಕಾರ ತಗೆದುಕೊಂಡಿದೆ; ಆ ರಸ್ತೆಯ ಒಂದು ನಿರ್ವಹಣೆಗಾಗಿ ಒಂದು ಕಿಲೋ ಮೀಟರ್‌ಗೆ ಒಂದು ಸಾವಿರ ರೂಪಾಯಿ ಪ್ರಕಾರ ೭ ಲಕ್ಷ ೧೪ ಸಾವಿರ ರೂಪಾಯಿಯನ್ನು ಖರ್ಚು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆದರೆ ಆ ರೋಡನ್ನು ಪಕ್ಕಾ ರೋಡ್ ಮಾಡಬೇಕಾದರೆ ನಾನು ಮೊದಲೇ ಹೇಳಿದ ಹಾಗೆ ಹಣಕಾಸಿನ ಒಂದು ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ಕಳೆದ ಸಾರಿ ಆರ್.ಸಿ. ರೋಡ್ ೮೦ ಕಿಲೋ ಮೀಟರ್ ರಸ್ತೆಯನ್ನು ವಹಿಸಿಕೊಂಡಿದ್ದೀರಿ. ಹಾಗೆಯೇ ಇನ್ನೆಷ್ಟು ರೋಡ್ಸ್‌ಗಳನ್ನು ಸರ್ಕಾರ ವಹಿಸಿಕೊಂಡಿದೆ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ—ಎಲ್ಲಾ ಆರ್.ಸಿ. ರೋಡುಗಳನ್ನೂ ಸರ್ಕಾರ ವಹಿಸಿಕೊಂಡಿದೆ. ಅದರಲ್ಲಿ ಕೆಲವು ಟಿ.ಡಿ.ಬಿ. ರೋಡ್‌ಗಳೂ ಇವೆ. ತಮಗೆ ಹೇಳಬೇಕಾದರೆ ೧೯೭೫ನೇ ಸಾಲಿನಲ್ಲಿ ವಹಿಸಿ ೧೯೭೮ನೇ ಸಾಲಿನಲ್ಲಿ ಒಟ್ಟು ೧೩ ಸಾವಿರ ಕಿಲೋ ಮೀಟರ್ ಅನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ತಾವು ಲಕ್ಷಗಟ್ಟಲೆ ಹಣ ಖರ್ಚು ಮಾಡಿ ರೂರಲ್ ಕಮ್ಯೂನಿಕೇಷನ್ ರೋಡ್ಸ್ ಮಾಡಿದಿರಿ. ಆದರಲ್ಲಿ ಕೆಲವೊಂದರ ರಸ್ತೆಗಳನ್ನು ಪಿಡಬ್ಲ್ಯೂಡಿಗೆ ತೆಗೆದುಕೊಂಡಿದ್ದೀರಿ, ಇನ್ನು ಕೆಲವು ರಸ್ತೆಗಳಲ್ಲಿ ಗಿಡಗಂಟಿಗಳು ಬೆಳೆದಿರುವುದರಿಂದ ಅದು ಅರಣ್ಯಕ್ಕೆ ಸೇರಿಸುವ ಯೋಜನೆ ಇದೆ. ಆದುದರಿಂದ ಈ ಗಿಡಗಂಟಿಗಳನ್ನು ಬೆಳೆದಿರುವ ಪ್ರದೇಶವನ್ನು ಅರಣ್ಯಕ್ಕೆ ಸೇರಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ—ನಾನು ಈಗಾಗಲೇ ಈ ಬಗ್ಗೆ ಉತ್ತರದಲ್ಲಿ ಹೇಳಿದ್ದೇನೆ, ಆದುದರಿಂದ ಮತ್ತೇ ಅದನ್ನೇ ನಾನು ರಿಪಿಟೇಷನ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಪಿ.ಡಬ್ಲ್ಯೂ.ಡಿ.ಗೆ ರಸ್ತೆಗಳನ್ನು ತೆಗೆದುಕೊಳ್ಳುವುದು ಸುಲಭ, ಸರ್ಕಾರ ಆಜ್ಞೆಯನ್ನು ಹೊರಡಿಸಿದರೆ ಸಾಕು ಆ ಕೆಲಸ ಬಹು ಸುಲಭ. ಆದರೆ ಆ ರಸ್ತೆಗಳನ್ನು ನಿರ್ವಹಣೆ ಮಾಡುವುದಕ್ಕೆ ಅದನ್ನು ಇಂಪ್ರೂ ಮಾಡುವುದಕ್ಕೆ ಒಂದು ಕಿಲೋ ಮೀಟರ್‌ಗೆ ಸಾವಿರಾರು ರೂಪಾಯಿ ಕೊಡಬೇಕಾಗುತ್ತದೆ. ನಾವು ಪಕ್ಕಾ ರೋಡ್ ಅನ್ನು ಮೇಂಟೇನ್ ಮಾಡುವುದಕ್ಕೆ ನಾನು ಈಗಾಗಲೇ ಹೇಳಿದ ಹಾಗೆ ಒಂದು ಕಿಲೋ ಮೀಟರ್‌ಗೆ ಒಂದು ಸಾವಿರ ರೂಪಾಯಿ ಪ್ರಕಾರ ಹಣ ಇಟ್ಟುಕೊಂಡಿದ್ದೇವೆ. ಇನ್ನು ಎಲ್ಲಾ ರಸ್ತೆಗಳನ್ನೂ ಸಪ ತೆಗೆದುಕೊಂಡರೆ ಇನ್ನೆಷ್ಟು ಹಣ ಬೇಕಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ ಒಂದು ವೇಳೆ ಆ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ.ಯವರು ತೆಗೆದುಕೊಂಡರೆ ಈಗಿನ ಒಂದು ಹಣಕಾಸಿನ ಪರಿಸ್ಥಿತಿಯಿಂದ ಆ ರಸ್ತೆಗಳನ್ನು ನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತದೆ ನಾನು ಎಂದು ಈ ಮೊದಲೇ ತಮಗೆ ತಿಳಿಸಿದ್ದೇನೆ,

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ಎಲ್ಲಾ ರೋಡ್‌ಗಳನ್ನು ಪಿ.ಡಬ್ಲ್ಯೂ.ಡಿ.ಯವರು ತೆಗೆದುಕೊಳ್ಳಬೇಕು ಎನ್ನುವುದು ನನ್ನ ವಾದವಲ್ಲ. ನನ್ನ ವಾದ ಏನೆಂದರೆ ಈ ಆರ್.ಸಿ. ರೋಡ್ಸ್‌ಗೆ ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಿದ್ದೀರಲ್ಲಾ ಇದಕ್ಕೆ ಒಂದು ಮೇಲಸ್ತುವಾರಿ ನೋಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೇ ಬೇಡವೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ—ಮೇಲುಸ್ತುವಾರಿ ನೋಡಿಕೊಳ್ಳುವ ಕೆಲಸ ಪಿ.ಡಬ್ಲ್ಯು.ಡಿ.ಗೆ ಸೇರಿದ್ದಾಗಿದೆ. ಅದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾಡಿಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್—ಎಲ್ಲಾ ಆರ್.ಸಿ.. ರೋಡ್ಸ್‌ನ್ನು ತೆಗದುಕೊಂಡಿಲ್ಲವಾ ಎಲ್ಲಾ ತಾಲ್ಲೂಕುಗಳಲ್ಲೂ ಕೆಲವೇ ರೋಡ್‌ನ್ನು ಮಾತ್ರ ಸರ್ಕಾರ ತೆಗೆದುಕೊಂಡಿದೆ.

ಶ್ರೀ ಎಸ್. ಬಂಗಾರಪ್ಪ—ತಮ್ಮ ಪ್ರಶ್ನೆ ಇರುವುದು ಟೇಕನ್ ಓವರ್ ರೋಡ್ಸ್‌ಗೆ ಸಂಬಂಧಪಟ್ಟಂತೆ ಇದೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್—ಗ್ರಾಮಾಂತರ ಪ್ರದೇಶಗಳಲ್ಲಿ ಪಿ.ಡಬ್ಲ್ಯು.ಡಿ.ಗೆ ತೆಗೆದುಕೊಳ್ಳದೇ ಇರುವಂಥಾ ರಸ್ತೆಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಯಾವುದಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ—ಟೇಕನ್ ಓವರ್ ರೋಡ್ಸ್‌ಗಳ ಮೇಲುಸ್ತುವಾರಿಯನ್ನು ಪಿ.ಡಬ್ಲ್ಯು.ಡಿ ಯವರು ನೋಡಿಕೊಳ್ಳುತ್ತಾರೆ. ಟೇಕನ್ ಓವರ್ ರೋಡ್ಸ್ ಆಲ್ಲದೇ ಇರತಕ್ಕಂಥಾದ್ದನ್ನು ಅವರೇ ನೋಡಿಕೊಳ್ಳುತ್ತಾರೆ ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದರ ಬಗ್ಗೆ ಕೆಲಸ ಮಾಡಿಸಬೇಕಾಗುತ್ತದೆ.

Extension of Civil Hospital at Dharwar

435. SRI BHAVU RAO DESHPANDE (Dharwar)—Will the Minister for Health and Family Welfare be pleased to state—

(*a*) whether there is a proposal before the Government for expansion of the Civil Hospital, Dharwar :

(b) if so, whether the Government would arrange to provide more beds then the existing at present ?

SRI M. MALLAPPA (Minister for Health and Family Welfare)—

(a) Not at present.

(b) Does not arise.

ಶ್ರೀ ಭಾವೂರಾವ್ ದೇಶಪಾಂಡೆ—ಸ್ವಾಮಿ, ತಾವು ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಸದ್ಯದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಇವಕ್ಕೆ ಕಾರಣ ಏನು ಅನ್ನುವುದನ್ನು ತಿಳಿಸುತ್ತೀರಾ ಸ್ವಾಮಿ ?

† ಶ್ರೀ ಎಂ. ಮಲ್ಲಪ್ಪ—ಈ ವರ್ಷ ಇಲ್ಲ ಅಂತ ಹೇಳಿದ್ದೇನೆ. ಹಣದ ಸೌಲಭ್ಯ ದೊರೆತಮೇಲೆ ಆ ಕೆಲಸ ಮಾಡಬೇಕಾಗುತ್ತದೆ ಆದರೇ ಪಾಂಚವಾರ್ಷಿಕ ಯೋಜನೆಯಲ್ಲಿ ತಾವು ಕೇಳಿರುವ ಧಾರವಾಡ ಸಿವಿಲ್ ಆಸ್ಪತ್ರೆಯನ್ನು ವಿಸ್ತರಿಸುವ ಬಗ್ಗೆ ವಿಚಾರಣೆ ಮಾಡುತ್ತಿದ್ದೆವೆ. ಆದನ್ನು ಒನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಕೊಳ್ಳುತ್ತೇವೆ.

ಶ್ರೀ ಭಾವೂರಾವ್ ದೇಶಪಾಂಡೆ—ಆಸ್ಪತ್ರೆಯನ್ನು ವಿಸ್ತರಣೆ ಮಾಡುವುದಕ್ಕೆ ಸಾಕಷ್ಟು ಜಾಗವಿದೆ. ಜೊತೆಗೆ ಸುತ್ತಮುತ್ತಲ ಹಳ್ಳಿಗಳಿಂದ ಬಹಳಷ್ಟು ರೋಗಿಗಳು ಮತ್ತು ಗರ್ಭಿಣಿ ಹೆಂಗಸರು ಈ ಆಸ್ಪತ್ರೆಗೆ ಬರುತ್ತಾರೆ. ಆದುದರಿಂದ, ಆಸ್ಪತ್ರೆಯ ವಿಸ್ತರಣೆ ಬಹಳ ಅಗತ್ಯವಿರುವುದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುವರೆ ?

ಶ್ರೀ ಎಂ. ಮಲ್ಲಪ್ಪ—ಇದನ್ನು ಆರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡಲಾಗುವುದು.

SRI G. B. SHANKAR RAO—Dharwar District is the biggest dsitrict from the point of view of population, and hence, will the Government consider the expansion of the Civil Hospital Dharwar early ?